**A**

**CCE RR**
**REVISED**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

KARNATAKA SECONDARY EDUCATION EXAMINATION BOARD, MALLESWARAM, BANGALORE – 560 003

ಎಸ್.ಎಸ್.ಎಲ್.ಸಿ. ಪರೀಕ್ಷೆ, ಸೆಪ್ಟೆಂಬರ್, 2020

S.S.L.C. EXAMINATION, SEPTEMBER, 2020

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 22. 09. 2020 ] ಸಂಕೇತ ಸಂಖ್ಯೆ : **01-K**

Date : 22. 09. 2020 ] CODE No. : **01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

(ಹೊಸ ಪಠ್ಯಕ್ರಮ / New Syllabus)

(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)

[ ಗರಿಷ್ಠ ಅಂಕಗಳು : 100

[ Max. Marks : 100

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 6 × 1 = 6 |
| 1. | 'ಸೂರ್ಯೋದಯ' ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>(ಎ) ಸವರ್ಣದೀರ್ಘ ಸಂಧಿ (ಬಿ) ವೃದ್ಧಿ ಸಂಧಿ<br>(ಸಿ) ಗುಣ ಸಂಧಿ (ಡಿ) ಯಣ್ ಸಂಧಿ<br>**ಉತ್ತರ :** (ಸಿ) ಗುಣ ಸಂಧಿ | |
| 2. | ಬಟ್ಟೆಗಿರಣಿ ರಟ್ಟು ಪೆನ್ಸಿಲ್ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ. ಈ ವಾಕ್ಯದಲ್ಲಿ ಇರಬೇಕಾದ ಲೇಖನ ಚಿಹ್ನೆ<br>(ಎ) ಅಲ್ಪವಿರಾಮ (ಬಿ) ಅರ್ಧವಿರಾಮ<br>(ಸಿ) ಆವರಣ (ಡಿ) ವಿವರಣಾ<br>**ಉತ್ತರ :** (ಎ) ಅಲ್ಪವಿರಾಮ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | 'ಮುಕ್ಕಣ್ಣು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ | |
| | (ಎ) ಅಂಶಿ (ಬಿ) ದ್ವಂದ್ವ | |
| | (ಸಿ) ಕ್ರಿಯಾ (ಡಿ) ದ್ವಿಗು | |
| | ***ಉತ್ತರ :*** (ಡಿ) ದ್ವಿಗು | |
| 4. | ಹಳಗನ್ನಡದಲ್ಲಿ 'ಅಧಿಕರಣ' ಕಾರಕಾರ್ಥದ ವಿಭಕ್ತಿ ಪ್ರತ್ಯಯ | |
| | (ಎ) ಇಂದಂ (ಬಿ) ಒಳ್ | |
| | (ಸಿ) ಅಂ (ಡಿ) ಅತ್ತಣಿಂದಂ | |
| | ***ಉತ್ತರ :*** (ಬಿ) ಒಳ್ | |
| 5. | 'ನೋಡು' ಧಾತುವಿನ ನಿಷೇಧಾರ್ಥಕ ರೂಪ | |
| | (ಎ) ನೋಡಲಿ (ಬಿ) ನೋಡೇವು | |
| | (ಸಿ) ನೋಡದು (ಡಿ) ನೋಡಿಯಾನು | |
| | ***ಉತ್ತರ :*** (ಸಿ) ನೋಡದು | |
| 6. | ರೊಯ್ಯನೆ, ಸುಯ್ಯನೆ ಪದಗಳು ಈ ಅವ್ಯಯಕ್ಕೆ ಉದಾಹರಣೆಯಾಗಿವೆ | |
| | (ಎ) ಸಾಮಾನ್ಯಾವ್ಯಯ (ಬಿ) ಅನುಕರಣಾವ್ಯಯ | |
| | (ಸಿ) ಅವಧಾರಣಾರ್ಥಕಾವ್ಯಯ (ಡಿ) ಕ್ರಿಯಾರ್ಥಕಾವ್ಯಯ | |
| | ***ಉತ್ತರ :*** (ಬಿ) ಅನುಕರಣಾವ್ಯಯ | |
| II. | **ಸಂಬಂಧೀಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) :** | $4 \times 1 = 4$ |
| 7. | ಕೆನೆಮೊಸರು : ಜೋಡುನುಡಿ :: ಬಟ್ಟಬಯಲು : ........................ . | |
| | ***ಉತ್ತರ :*** ದ್ವಿರುಕ್ತಿ | |
| 8. | ಗುರು ಒಂದು ಆದಿಯೊಳ್ : ಉತ್ಪಲ :: ಲಘು ನಾಲ್ಕು : ........................ . | |
| | ***ಉತ್ತರ :*** ಚಂಪಕ | |
| 9. | ಹನ್ನೆರಡು : ಸಂಖ್ಯಾವಾಚಕ :: ಮೂಡಣ : ........................ . | |
| | ***ಉತ್ತರ :*** ದಿಗ್ವಾಚಕ | |
| 10. | ದಿಟ್ಟಿ : ದೃಷ್ಟಿ :: ತವಸಿ : ........................ . | |
| | ***ಉತ್ತರ :*** ತಪಸ್ವಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| III. | **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು.** **(ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) :** | 7 × 1 = 7 |
| 11. | ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು ?<br>**ಉತ್ತರ :**<br>ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ದನು. | |
| 12. | ಶಾನುಭೋಗರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಯಾವ ಕಣಿವೆಯನ್ನು ದಾಟಿ ಹೋಗಬೇಕಿತ್ತು ?<br>**ಉತ್ತರ :**<br>ಶಾನುಭೋಗರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಿತ್ತು. | |
| 13. | ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು ?<br>**ಉತ್ತರ :**<br>ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಹೊನ್ನಿನ ಕಳ್ಳತನದ ಆರೋಪವನ್ನು ಹೊರಿಸಿದನು. | |
| 14. | ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು ?<br>**ಉತ್ತರ :**<br>ಸುಕುಮಾರಸ್ವಾಮಿಗೆ ಸೆಟ್ಟಿಯ ಪಟ್ಟವನ್ನು ಕಟ್ಟಲಾಯಿತು. | |
| 15. | ಶ್ರೀಕೃಷ್ಣನು ಕರ್ಣನನ್ನು ಮೈದುನತನದ ಸರಸವೆಸಗಿ ರಥದಲ್ಲಿ ಹೇಗೆ ಕುಳ್ಳಿರಿಸಿಕೊಂಡನು ?<br>**ಉತ್ತರ :**<br>ಶ್ರೀಕೃಷ್ಣನು ಕರ್ಣನನ್ನು ಮೈದುನತನದ ಸರಸವೆಸಗಿ ರಥದಲ್ಲಿ ಬರಸೆಳೆದು ಕುಳ್ಳಿರಿಸಿಕೊಂಡನು. | |
| 16. | ಲವನು ಕುದುರೆಯನ್ನು ಯಾವುದರಿಂದ ಕಟ್ಟಿದನು ?<br>**ಉತ್ತರ :**<br>ಲವನು ಕುದುರೆಯನ್ನು ಉತ್ತರೀಯದಿಂದ ಕಟ್ಟಿದನು. | |
| 17. | ಸುಂದರಿಗೆ ಮೃಗದ ಮಾತು, ನಡವಳಿಕೆಗಳು ನಗು ತರಿಸುವಂತಿದ್ದರೂ ಮನಕರಗುತ್ತಿತ್ತು ಏಕೆ ?<br>**ಉತ್ತರ :**<br>ಸುಂದರಿಗೆ ಮೃಗದ ಮಾತು, ನಡವಳಿಕೆಗಳು ನಗು ತರಿಸುವಂತಿದ್ದರೂ ಆತನ ಕಾಳಜಿಯನ್ನು ನೆನೆದು ಮನಕರಗುತ್ತಿತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| IV. | **ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು) :** | 10 × 2 = 20 |
| 18. | ಲಂಡನ್ನಿನ ವೆಸ್ಟ್ ಮಿನ್‌ಸ್ಟರ್ ಅಬೆಯಲ್ಲಿನ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯನ್ನು ತಿಳಿಸಿ.<br>**ಉತ್ತರ :**<br>ಲಂಡನ್‌ನಲ್ಲಿ ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಅವರ ಸಿಂಹಾಸನದ ಮೇಲೆ ಒಂದು ಕಲ್ಲುಪಾಟಿಯನ್ನು ಹಾಕುತ್ತಾರೆ. ಪಟ್ಟಾಭಿಷೇಕವಾಗುವಾಗ ಮಾತ್ರ ಸಾಮ್ರಾಟರು ಇದರ ಮೇಲೆ ಕೂಡಬೇಕು. ಈ ಶಿಲೆಯನ್ನು ಒಳಗೊಂಡ ಸಿಂಹಾಸನವು ವೆಸ್ಟ್‌ಮಿನಿಸ್ಟರ್ ಮಂದಿರದಲ್ಲಿಯ ಒಂದು ಭಾಗದಲ್ಲಿದೆ. 'ಸ್ಟೋನ್ ಆಫ್ ಸ್ಕೋನ್' ಎಂದು ಇದರ ಹೆಸರು. 3ನೇ ಎಡ್ವರ್ಡ್‌ನು ಸ್ಕಾಟ್‌ಲೆಂಡಿನ ಅರಸರಿಂದ ಇದನ್ನು ಕಿತ್ತುಕೊಂಡು ಬಂದಂತೆ ಕಾಣುತ್ತದೆ. ಅಂದಿನಿಂದ ಎಲ್ಲ ಸಾಮ್ರಾಟರ ಅಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ. ಇಂಗ್ಲೆಂಡಿನ ಅತುಲ ವೈಭವವನ್ನು ನೋಡಿದರೆ ಇಂಥದೊಂದು ವಿಶೇಷವೇನಾದರೂ ಅದರಲ್ಲಿರಬೇಕೆನಿಸುತ್ತದೆ. | |
| 19. | ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ ?<br>**ಉತ್ತರ :**<br>ಲಂಡನ್ನಿನ ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಉಪಾಹಾರ ಗೃಹಗಳಲ್ಲಿ ಕಾರ್ಯನಿರ್ವಹಿಸುವವರು ಸಹ ಹೆಣ್ಣು ಮಕ್ಕಳೇ ಆಗಿರುತ್ತಾರೆ. ಯಾವುದಾದರೊಂದು ದೊಡ್ಡ ಅಂಗಡಿಗೆ ಹೋದರೆ ಅಲ್ಲಿಯೂ ಟೈಪಿಸ್ಟ್, ಕಾರಕೂನ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ. ಸಿನಿಮಾ ಗೃಹದಲ್ಲಿ ಜಾಗವನ್ನು ಹುಡುಕಿಕೊಡುವವರು ಸಹ ಹೆಣ್ಣು ಮಕ್ಕಳೇ. ಹೀಗೆ ಹೆಣ್ಣು ಮಕ್ಕಳನ್ನು ಅತ್ಯಾದರದಿಂದ ನಡೆಸಿಕೊಳ್ಳುವ ಸಂಸ್ಕೃತಿಯ ಶಿಖರವನ್ನು ಇಂಗ್ಲೆಂಡಿನಲ್ಲಿ ಕಾಣಬಹುದು. | |
| 20. | ಹುಲಿಯು ನಿರಾಶೆ ಹೊಂದಿ ಕೋಪದಿಂದ ಘರ್ಜಿಸಿ ಪಲಾಯನ ಮಾಡಲು ಕಾರಣವೇನು ?<br>**ಉತ್ತರ :**<br>ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ಕೆಲವು ರೈತರು ತಿಂಗಳ ಬೆಳಕಿನಲ್ಲಿ ಗಾಡಿ ಹೊಡೆದುಕೊಂಡು ತಮ್ಮ ಹಳ್ಳಿಗೆ ಹಿಂದಿರುಗುತ್ತಿದ್ದಾಗ ಎತ್ತುಗಳು ಏನು ಮಾಡಿದರೂ ಮುಂದೆ ಹೋಗದೆ ಕಣಿ ಹಾಕಿಕೊಂಡವು. ಅದೇ ವೇಳೆಗೆ ಎದೆ ನಡುಗುವಂತೆ ಹುಲಿಯ ಘರ್ಜನೆ ಕೇಳಿಸಿತು. ಎತ್ತುಗಳ ಘಂಟೆಯ ಶಬ್ದವನ್ನು ಕೇಳಿದ ಹುಲಿ ಕೆಲವು ನಿಮಿಷ ತಡೆದು ನೋಡಿತು. ಆದರೆ ರೈತರ ಮಾತು ಕೇಳಿ ಬಂದ ಮೇಲೆ ನಿರಾಶೆ ಹೊಂದಿ, ಕೋಪದಿಂದ ಘರ್ಜಿಸಿ ಪಲಾಯನ ಮಾಡಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | ಅರಸ ವೃಷಭಾಂಕನು ಆಶ್ಚರ್ಯಗೊಂಡು ಯಶೋಭದ್ರೆಯ ಮನೆಗೆ ಆಗಮಿಸಲು ಕಾರಣವೇನು ?<br>**ಉತ್ತರ :**<br>ಒಂದು ದಿನ ರತ್ನದ್ವೀಪದಿಂದ ಬಂದ ವರ್ತಕನೊಬ್ಬನು ಲಕ್ಷದಿನಾರುಗಳ ಬೆಲೆಯುಳ್ಳ ಸರ್ವರತ್ನಗಳಿಂದ ಕೂಡಿದ ಕಂಬಳಿಯನ್ನು ಉಜ್ಜೇನಿಯ ಅರಸ ವೃಷಭಾಂಕನಿಗೆ ತೋರಿಸಿದಾಗ ಅವನು ಅದರ ಬೆಲೆಯನ್ನು ಕೇಳಿ ಕೊಳ್ಳಲಾಗದೆ ಹಿಂದಕ್ಕೆ ಕಳುಹಿಸಿದನು. ಆಗ ಆ ವರ್ತಕನು ರತ್ನಕಂಬಳಿಯನ್ನು ಯಶೋಭದ್ರೆಗೆ ತೋರಿಸಿದಾಗ ಅವಳು ಲಕ್ಷ ದಿನಾರುಗಳನ್ನು ಕೊಟ್ಟು ಕೊಂಡುಕೊಂಡು ಅದನ್ನು ಮೂವತ್ತೆರಡು ತುಂಡುಗಳನ್ನಾಗಿ ಮಾಡಿ ತನ್ನ ಮೂವತ್ತೆರಡು ಸೊಸೆಯರಿಗೆ ಕೊಟ್ಟಳು. ಅವರು ಅದನ್ನು ತಮ್ಮ ಚಪ್ಪಲಿಗಳಿಗೆ ಸೇರಿಸಿದರು. ಇದನ್ನು ಕೇಳಿ ಅರಸ ವೃಷಭಾಂಕನು ಆಶ್ಚರ್ಯಗೊಂಡು ಆ ವೈಭವವನ್ನು ನೋಡಲು ಯಶೋಭದ್ರೆಯ ಮನೆಗೆ ಬಂದನು. | |
| 22. | ಹಲಗಲಿಯ ಮೇಲೆ ಬ್ರಿಟಿಷರ ದಂಡು ಹೇಗೆ ದಾಳಿ ನಡೆಸಿತು ?<br>**ಉತ್ತರ :**<br>ಬ್ರಿಟಿಷ್ ಸರ್ಕಾರ ಹೊರಡಿಸಿದ ನಿಶ್ಶಸ್ತ್ರೀಕರಣ ಆದೇಶವನ್ನು ವಿರೋಧಿಸಿದ ಹಲಗಲಿಯ ಬೇಡರನ್ನು ಬಗ್ಗು ಬಡಿಯಲು ಬ್ರಿಟಿಷರ ದಂಡು ಬಂದು ಹಲಗಲಿಯ ಬೇಡರ ಬೆನ್ನು ಹತ್ತಿ ತಿರಿತಿರ್ವಿ ಕೊಂದರು. ನಡುವೆ ಹಾಕಿಕೊಂಡು ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು. ಹೀಗೆ ಹಲಗಲಿಯ ಮೇಲೆ ದಾಳಿ ನಡೆಸಿ ರಕ್ತದ ಕೋಡಿ ಹರಿಸಿ, ಏನೂ ಉಳಿಯದ ಹಾಗೇ ಎಲ್ಲಾ ವಸ್ತುಗಳನ್ನು ದೋಚಿ ಇಡೀ ಊರಿಗೆ ಕೊಳ್ಳಿ ಇಟ್ಟು ನಾಶ ಮಾಡಿದರು. | |
| 23. | ಕುಂಪಣಿ ಸರಕಾರದ ವಿರುದ್ಧ ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?<br>**ಉತ್ತರ :**<br>೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಕುಂಪಣಿ ಸರ್ಕಾರ ಭಾರತೀಯರ ಮೇಲೆ ನಿಶ್ಶಸ್ತ್ರೀಕರಣ ಆದೇಶವನ್ನು ಹೊರಡಿಸಿತು. ಈ ಆದೇಶವನ್ನು ವಿರೋಧಿಸಿ ಹಲಗಲಿಯ ಬೇಡರು ಪೂಜೇರಿ ಹನುಮಾ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರ ನಾಯಕತ್ವದಲ್ಲಿ ಸಭೆ ಸೇರಿ ತಮ್ಮ ಬದುಕಿನ ಆಧಾರವಾದ ಆಯುಧಗಳನ್ನು ಸರ್ಕಾರಕ್ಕೆ ಹಿಂದಿರುಗಿಸಲು ಒಪ್ಪಲಿಲ್ಲ. ಆದರೆ ಬ್ರಿಟಿಷರು ಹಲಗಲಿಗೆ ಬಂದು ಬಲವಂತವಾಗಿ ಆಯುಧಗಳನ್ನು ಕಸಿದುಕೊಳ್ಳಲು ಪ್ರಾರಂಭಿಸಿದರು. ಇದು ಹಲಗಲಿ ಬೇಡರು ಕುಂಪಣಿ ಸರ್ಕಾರದ ವಿರುದ್ಧ ದಂಗೆ ಏಳಲು ಕಾರಣವಾಯಿತು. | |
| 24. | ಮನುಷ್ಯತ್ವದ ಮಹಿಮೆಯನ್ನು ಕುರಿತು ವಿವೇಕಾನಂದರ ಅಭಿಪ್ರಾಯವೇನು ?<br>**ಉತ್ತರ :**<br>"ಮನುಷ್ಯತ್ವದ ಮಹಿಮೆಯನ್ನು ಎಂದಿಗೂ ಮರೆಯಬೇಡಿ. ನಮಗಿಂತಲೂ ಬೇರೆಯಾದ ದೇವರು ಹಿಂದೆ ಇರಲಿಲ್ಲ. ಮುಂದೆ ಬರುವುದಿಲ್ಲ. ಕ್ರೈಸ್ತ, ಬುದ್ಧ, ಕೃಷ್ಣ, ರಾಮರೆಲ್ಲಾ ಅಹಮಸ್ಮಿ ಎಂಬ ಮಹಾವಾರಿಧಿಯ ತರಂಗಗಳು ಮಾತ್ರ" ಎಂದು ವಿವೇಕಾನಂದರು ಘೋಷಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 25. | ಕತ್ತಲೆ ಗವ್ವೆನ್ನುವ ಗುಡಿಸಲೊಳಗೆ ಬರಲು ವಸಂತನಿಗೂ ಹೆದರಿಕೆಯಾದದ್ದು ಏಕೆ ?<br>**ಉತ್ತರ :**<br>ಕತ್ತಲೆ ಗವ್ವೆನ್ನುವ ಗುಡಿಸಲಿನಲ್ಲಿ ಪುಟ್ಟ ಪೋರಿಯ ಅಮ್ಮ ಗೂರುತ್ತ ಮಲಗಿದ್ದಾಳೆ. ತೂತು ಬಿದ್ದ ಸೀರೆಯಲ್ಲಿ ಬಾಲ ರವಿ ಸೊರಗಿದ್ದಾನೆ. ಸುಣ್ಣ ಕಾಣದ ಗೋಡೆಗಳು ಮುಖ ಮುಚ್ಚಿಕೊಂಡಿವೆ. ಹೀಗೆ ಇಡೀ ಗುಡಿಸಲೊಳಗೆ ಕತ್ತಲೆ ಆವರಿಸಿ ಗವ್ವೆನ್ನುತ್ತಿದ್ದುದರಿಂದ ಒಳಗೆ ಬರಲು ವಸಂತನಿಗೂ ಹೆದರಿಕೆಯಾಯಿತು. | |
| 26. | ಭಗತ್‌ಸಿಂಗ್ ತನ್ನ ಸಹಚರರೊಂದಿಗೆ ಮರಣ ದಂಡನೆಗೆ ಈಡಾಗಲು ಕಾರಣವೇನು ?<br>**ಉತ್ತರ :**<br>ಜಲಿಯನ್ ವಾಲಾಬಾಗಿನ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದ ಬಾಲಕ ಭಗತ್‌ಸಿಂಗ್ ಮುಂದೆ ತನ್ನ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಇದರ ಫಲವಾಗಿ ತನ್ನ ಸಹಚರರಾದ ಸುಖ್‌ದೇವ್, ರಾಜ್‌ಗುರು, ಭಟುಕೇಶ್ವರ ದತ್ತರೊಂದಿಗೆ ಮರಣ ದಂಡನೆಗೆ ಈಡಾಗಿ ತಾಯಿ ಭಾರತಾಂಬೆಯ ಸ್ವಾತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರಯೋಧನಾಗಿ ಅಮರನಾದನು. | |
| 27. | 'ತಾವರೆ ಬೇರು' ಎಂಬ ಉತ್ತರ ಬರುವ ಒಗಟಿನ ವಿಶೇಷತೆಯನ್ನು ತಿಳಿಸಿ.<br>**ಉತ್ತರ :**<br>ತಾವರೆಯು ಕೆಸರಿನಲ್ಲಿ ಹುಟ್ಟುತ್ತದೆ. ಕೆಸರಿನಲ್ಲೇ ಬೆಳೆದು ನಂತರ ಅದು ಒಂದು ಗಿಡದ ರೂಪವನ್ನು ಪಡೆದುಕೊಳ್ಳುತ್ತದೆ. ಹೀಗೆ ಕೆಸರಿನಲ್ಲೇ ಅರಳುವ ತಾವರೆಯು ಕೆಸರಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದೆ. ಇದು 'ತಾವರೆ ಬೇರು' ಎಂಬ ಉತ್ತರ ಬರುವ ಒಗಟಿನ ವಿಶೇಷತೆ. | |
| V. | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಬಿರುದು/ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | ಪು.ತಿ. ನರಸಿಂಹಾಚಾರ್ :<br>**ಉತ್ತರ :**<br>ಪು.ತಿ.ನ. ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್. ಇವರು ಕನ್ನಡ ನವೋದಯದ ಪ್ರಮುಖ ಕವಿಗಳಲ್ಲಿ ಒಬ್ಬರಾಗಿದ್ದಾರೆ. ಇವರು ೧೯೦೫ರಲ್ಲಿ ಮಂಡ್ಯ ಜಿಲ್ಲೆಯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

ಮೇಲುಕೋಟೆಯಲ್ಲಿ ಜನಿಸಿದರು. ಕನ್ನಡ ವಿಶ್ವಕೋಶದ ಭಾಷಾಂತರಕಾರರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ.

ಕನ್ನಡ ನವೋದಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಪು.ತಿ.ನ. ಅವರು ಗೀತನಾಟಕ, ಕವಿತೆ, ಸಣ್ಣಕತೆ, ಪ್ರಬಂಧ, ವಿಚಾರಸಾಹಿತ್ಯ ಮೊದಲಾದ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದ್ದಾರೆ. ಗೀತನಾಟಕ ಇವರ ಪ್ರಾತಿನಿಧಿಕ ಪ್ರಕಾರ. ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ವಿಕಟಕವಿವಿಜಯ, ಹಂಸದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸಸರಸ್ವತಿ, ಗಣೇಶದರ್ಶನ, ಶಾರದಯಾಮಿನಿ, ಶ್ರೀಹರಿಚರಿತೆ, ರಥಸಪ್ತಮಿ ಇವರ ಪ್ರಮುಖ ಕೃತಿಗಳು.

ಹಂಸದಮಯಂತಿ ಮತ್ತು ಇತರ ರೂಪಕಗಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶ್ರೀಹರಿಚರಿತೆ ಕಾವ್ಯಕ್ಕೆ ಪಂಪ ಪ್ರಶಸ್ತಿ ಲಭಿಸಿದೆ. ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿದೆ. ಚಿಕ್ಕಮಗಳೂರಿನಲ್ಲಿ ೧೯೮೧ರಲ್ಲಿ ಸಮಾವೇಶಗೊಂಡ ೫೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

29. ಜಿ.ಎಸ್. ಶಿವರುದ್ರಪ್ಪ :

***ಉತ್ತರ :***

ಜಿ.ಎಸ್. ಶಿವರುದ್ರಪ್ಪ ಎಂದೇ ಪ್ರಸಿದ್ಧರಾಗಿರುವ ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ ಅವರು ೧೯೨೬ ರಲ್ಲಿ ಜನಿಸಿದರು. ಇವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದವರು. ಮೈಸೂರು, ಉಸ್ಮಾನಿಯಾ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

ಆಧುನಿಕ ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಶಿವರುದ್ರಪ್ಪ ಅವರು ಸಾಮಗಾನ, ಚೆಲುವು–ಒಲವು, ದೇವಶಿಲ್ಪ, ದೀಪದ ಹೆಜ್ಜೆ, ಅನಾವರಣ, ವಿಮರ್ಶೆಯ ಪೂರ್ವಪಶ್ಚಿಮ, ಮಾಸ್ಕೊದಲ್ಲಿ ಇಪ್ಪತ್ತೆರಡು ದಿನಗಳು, ಸೌಂದರ್ಯ ಸಮೀಕ್ಷೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಕಾವ್ಯಾರ್ಥಚಿಂತನ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿರುವ ಶಿವರುದ್ರಪ್ಪ ಅವರು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ನಾಡೋಜ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ಬೆಂಗಳೂರು ಮತ್ತು ಕುವೆಂಪು ವಿಶ್ವವಿದ್ಯಾನಿಲಯಗಳ ಗೌರವ ಡಿ.ಲಿಟ್ ಪದವಿ, ರಾಷ್ಟ್ರಕವಿ ಅಭಿಧಾನ ಮತ್ತು ಪಂಪ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ೧೯೯೨ರಲ್ಲಿ ದಾವಣಗೆರೆಯಲ್ಲಿ ಸಮಾವೇಶಗೊಂಡ ೬೧ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VI. | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | 1 × 3 = 3 |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |
| 30. | ಎಲೆ ಶಬರ ಕಾಡ ಬಡನರಿ<br>ಮೊಲ ಪುಲ್ಲೆಗಳಲ್ಲಿ ನಿನ್ನ ಸಾಹಸಮುಂದೋ<br><br>U U U U \| U — U \| U U U U \|<br>ಎಲೆ ಶಬ \| ರ ಕಾಡ \| ಬಡನರಿ \| = ೧೨<br><br>U U — \| U U — \| U — U \| — U U \| — — \|<br>ಮೊಲ ಪು \| ಲ್ಲೆಗಳ \| ಲ್ಲಿ ನಿನ್ನ \| ಸಾಹಸ \| ಮುಂದೋ \| = ೨೦<br><br>ಇದು ಮಾತ್ರಾಗಣ ಛಂದಸ್ಸಿನ ಕಂದ ಪದ್ಯದಲ್ಲಿ ರಚಿತವಾಗಿದೆ. | |
| VII. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | 1 × 3 = 3 |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ಅಂಶಗಳನ್ನು ಗುರುತಿಸಿ ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |
| 31. | "ಗೀಜುಗನ ಗೂಡುಗಳು ತೂಗುವ ತೊಟ್ಟಿಲಿನಂತೆ ತೂಗುತ್ತಿದ್ದವು"<br>***ಉತ್ತರ :***<br>*ಅಲಂಕಾರದ ಹೆಸರು* : ಉಪಮಾಲಂಕಾರ<br>*ಲಕ್ಷಣ* : ಎರಡು ವಸ್ತುಗಳಿಗೆ ಇರುವ ಪರಸ್ಪರ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.<br>*ಸಮನ್ವಯ :* *ಉಪಮೇಯ* : ಗೀಜುಗನ ಗೂಡುಗಳು<br>*ಉಪಮಾನ* : ತೂಗುವ ತೊಟ್ಟಿಲು<br>*ಉಪಮಾವಾಚಕ ಪದ :* ಅಂತೆ<br>*ಸಮಾನಧರ್ಮ :* ತೂಗುವುದು<br>ಇಲ್ಲಿ ಗೀಜುಗನಗೂಡು ಎಂಬ ಉಪಮೇಯವನ್ನು ತೂಗುವ ತೊಟ್ಟಿಲು ಉಪಮಾನಕ್ಕೆ 'ಅಂತೆ' ಎಂಬ ಉಪಮಾವಾಚಕದ ಮೂಲಕ 'ತೂಗುವುದು' ಎಂಬ ಸಮಾನಧರ್ಮವನ್ನು ಹೇಳಿ ಪರಸ್ಪರ ಹೋಲಿಸಿರುವುದರಿಂದ ಇದು ಪೂರ್ಣೋಪಮಾಲಂಕಾರ (ಉಪಮಾಲಂಕಾರ)ದ ಲಕ್ಷ್ಯವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VIII. | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | 1 × 3 = 3 |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 32. | ಅರಮನೆಗಿಂತ ನೆರೆಮನೆ ಲೇಸು<br>**ಅಥವಾ**<br>ಮಾಡಿದ್ದುಣ್ಣೋ ಮಹರಾಯ | |
| IX. | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | 6 × 3 = 18 |
| | ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ಸಾರಾ ಅಬೂಬಕ್ಕರ್ ಅವರು ರಚಿಸಿರುವ 'ಚಪ್ಪಲಿಗಳು' ಎಂಬ ಕಥಾ ಸಂಕಲನದಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಯುದ್ಧದಲ್ಲಿನ ವೈಮಾನಿಕ ದಾಳಿಯಿಂದ ಪಾರಾದ ಡಾಕ್ಟರ್ ರಾಹಿಲನು ಗಾಯಗೊಂಡು ತೆವಳುತ್ತಾ ರಕ್ಷಣೆಗಾಗಿ ಶತ್ರು ದೇಶದವರ ಮನೆಯ ಬಾಗಿಲು ಬಡಿಯುತ್ತಾನೆ. ಆಗ ಮುದುಕಿಯೊಬ್ಬಳು ಗೊಣಗಿಕೊಳ್ಳುತ್ತಾ ಬಾಗಿಲು ತೆರೆದು, ಸಮೀಪ ಬಂದು "ಯಾರಪ್ಪಾ ನೀನು? ನಮ್ಮ ಕಡೆಯವನು ತಾನೇ?" ಎಂದು ಭಯ ಮತ್ತು ಸಂದೇಹದಿಂದ ರಾಹಿಲನನ್ನು ಪ್ರಶ್ನಿಸಿದ ಸಂದರ್ಭದಲ್ಲಿ ರಾಹಿಲನು ಮುದುಕಿಗೆ ಈ ಮಾತನ್ನು ಹೇಳುತ್ತಾನೆ.<br>***ಸ್ವಾರಸ್ಯ :*** ಜನಸಾಮಾನ್ಯರಲ್ಲಿ ಯುದ್ಧದ ಬಗ್ಗೆ ಇರುವ ತಿರಸ್ಕಾರವನ್ನು, ಯುದ್ಧದಲ್ಲಿ ನೊಂದವರು ಧರ್ಮಭಿನ್ನತೆ, ದೇಶ ಭಿನ್ನತೆ, ವೈರಿ–ಮಿತ್ರ ಎಂಬುದನ್ನು ಪರಿಗಣಿಸದೆ ಪರಸ್ಪರರು ಸಂಕಷ್ಟ ಪರಿಹಾರಕ್ಕೆ, ರಕ್ಷಣೆಗೆ ತೊಡಗುವ ಮಾನವೀಯ ಮೌಲ್ಯಯುತ ನಡವಳಿಕೆಗಳು ಇಲ್ಲಿ ಮನೋಜ್ಞವಾಗಿ ಮೂಡಿಬಂದಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 34. | "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ." | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ದೇವನೂರ ಮಹಾದೇವ ಅವರು ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಎಂಬ ವೈಚಾರಿಕ ಬಿಡಿ ಲೇಖನಗಳ ಸಂಕಲನದಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಒಮ್ಮೆ ಒಂದು ಗ್ರಾಮದ ಜನರೆಲ್ಲಾ ಸೇರಿ ಮಂಚಮ್ಮದೇವತೆಗೆ ಗುಡಿ ಕಟ್ಟುತ್ತಿರುವಾಗ ಒಬ್ಬನ ಮೈಮೇಲೆ ಆ ದೇವತೆ ಆವಾಹಿಸಿಕೊಂಡು 'ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ?'' ಎಂದಾಗ ಜನರು 'ನಿನಗೊಂದು ಗುಡಿಮನೆ ಕಟ್ತಾ ಇದ್ದೀವಿ ತಾಯಿ' ಅಂತಾರೆ. ಆಗ ದೇವತೆ ನಿಮಗೆಲ್ಲಾ ಮನೆ ಉಂಟಾ ಎಂದು ಪ್ರಶ್ನಿಸಿದಾಗ ಅಲ್ಲೊಬ್ಬ 'ನನಗಿಲ್ಲ ತಾಯಿ' ಎಂದು ಹೇಳಿದ ಸಂದರ್ಭದಲ್ಲಿ ಮಂಚಮ್ಮದೇವಿಯು ಗ್ರಾಮದ ಜನರಿಗೆ ಈ ಮಾತನ್ನು ಹೇಳುತ್ತಾಳೆ. | |
| | ***ಸ್ವಾರಸ್ಯ :*** ಸಾಮಾಜಿಕ ಸಾಮರಸ್ಯಕ್ಕೆ ಮೊದಲನೆಯ ಅಡ್ಡಿ ಮೌಢ್ಯ. ಮೌಢ್ಯ ಮರೆಯಾಗುವವರೆಗೆ ಸಾಮರಸ್ಯವೆಂಬುದು ಕನಸಾಗಿಯೇ ಉಳಿಯುತ್ತದೆ. ಅಂತರಂಗದ ಹೊಂದಾಣಿಕೆಯಿಂದ ಮಾತ್ರ ಸಾಮರಸ್ಯ ಸಾಧ್ಯವಾಗುತ್ತದೆ. ಆದ್ದರಿಂದ ಕಾರುಣ್ಯ, ಸಮತೆಗಳೇ ದೇವರು. ಇವುಗಳು ಜಾಗೃತವಾಗಬೇಕೆಂಬುದು ಇಲ್ಲಿ ಸ್ವಾರಸ್ಯ ಪೂರ್ಣವಾಗಿ ಅಭಿವ್ಯಕ್ತಗೊಂಡಿದೆ. | |
| 35. | "ಹುಸಿಯದ ಬೇಹಾರಿಯೇ ಇಲ್ಲ." | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ದುರ್ಗಸಿಂಹ ಕವಿ ರಚಿಸಿರುವ 'ಕರ್ಣಾಟಕ ಪಂಚತಂತ್ರಂ' ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಮರದ ಪೊಟರೆಯೊಳಗೆ ಅಡಗಿ ಕುಳಿತಿದ್ದ ದುಷ್ಟಬುದ್ಧಿಯ ತಂದೆ ಪ್ರೇಮಮತಿಯು ಮತಿಗೆಟ್ಟು ಧರ್ಮಬುದ್ಧಿಯೇ ಸಂಪತ್ತನ್ನು ತೆಗೆದುಕೊಂಡನು ಎಂದು ಹೇಳಿದಾಗ ಧರ್ಮಬುದ್ಧಿಯು ಇದು ಆಶ್ಚರ್ಯಕರವಾದದ್ದು ಎಂದು ಯೋಚಿಸಿ, ಆ ಮರವನ್ನು ಪ್ರದಕ್ಷಿಣೆ ಮಾಡಿ ಬರುವಾಗ ಅಲ್ಲಿ ಮನುಷ್ಯ ಸಂಚಾರವಾಗಿರುವುದನ್ನು ಗಮನಿಸಿದ ಸಂದರ್ಭದಲ್ಲಿ ಧರ್ಮಾಧಿಕರಣದವರಿಗೆ ಈ ಮಾತನ್ನು ಹೇಳುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಸ್ವಾರಸ್ಯ :** ದುಷ್ಟಬುದ್ಧಿಯು ತನ್ನ ವಂಚನೆ, ಕಪಟತನ, ಮೋಸದಿಂದ ತಾನು ಹಾಳಾಗುವುದಲ್ಲದೆ, ಸಂಪತ್ತಿಗಾಗಿ ತನ್ನ ತಂದೆಯನ್ನು ಬಲಿಕೊಡುವ ಹೃದಯಹೀನ ಕೃತ್ಯದಿಂದ 'ಮಾಡಿದ್ದುಣ್ಣೋ ಮಹರಾಯ' ಎಂಬ ನೀತಿಯಂತೆ ಕೆಟ್ಟ ಫಲವನ್ನು ಅನುಭವಿಸುವಂತಾಯಿತು. ಹಾಗೇ 'ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ' ಎಂಬ ನೀತಿಯನ್ನು ಅತ್ಯಂತ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ. | |
| 36. | "ನಿನ್ನಯ ವೀರರೈವರ ನೋಯಿಸೆನು ರಾಜೀವಸಖನಾಣೆ" | |
| | **ಉತ್ತರ :** | |
| | **ಆಯ್ಕೆ :** ಪ್ರಸ್ತುತ ಹೇಳಿಕೆಯನ್ನು ಕುಮಾರವ್ಯಾಸ ಕವಿ ರಚಿಸಿರುವ 'ಕರ್ಣಾಟ ಭಾರತ ಕಥಾ ಮಂಜರಿ' ಎಂಬ ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | **ಸಂದರ್ಭ :** ಶ್ರೀಕೃಷ್ಣನು ಪಾಂಡವರು, ಕೌರವರ ನಡುವೆ ಸಂಧಿ ಮಾಡಲು ಹೋಗಿ ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ತನ್ನ ಪಕ್ಕದಲ್ಲಿಯೇ ತೊಡೆ ತಾಗುವಂತೆ ರಥದಲ್ಲಿ ಕೂರಿಸಿಕೊಂಡು ಆತನಿಗೆ ಜನ್ಮರಹಸ್ಯವನ್ನು ತಿಳಿಸಿ, ಅನೇಕ ಆಮಿಷಗಳನ್ನು ಒಡ್ಡಿದ ಸಂದರ್ಭದಲ್ಲಿ ಕರ್ಣನು ಶ್ರೀಕೃಷ್ಣನಿಗೆ ಈ ಮಾತನ್ನು ಹೇಳುತ್ತಾನೆ. | |
| | **ಸ್ವಾರಸ್ಯ :** ಅಸಾಮಾನ್ಯನೂ, ಶೌರ್ಯಕ್ಕೆ, ದಾನಕ್ಕೆ, ಉದಾತ್ತತೆಗೆ, ಕರುಣೆಗೆ ಹೆಸರಾಗಿದ್ದ ಕರ್ಣನಿಗೆ ಆತನ ಜನ್ಮರಹಸ್ಯ ಎಂತಹ ಸಂಕಟವನ್ನು ಉಂಟುಮಾಡಿತು. ಅವನ ಸ್ವಾಮಿನಿಷ್ಠೆಯ ಮುಂದೆ ಶ್ರೀಕೃಷ್ಣನೊಡ್ಡಿದ ಪ್ರಲೋಭನೆ ಹೇಗೆ ವ್ಯರ್ಥವಾಯಿತು ಹಾಗೂ ಅಸಹಾಯಕನಾದ ಸ್ಥಿತಿಯಲ್ಲಿ ನೋವು, ಸಂಕಟದಿಂದ ಬಳಲುವ ಕರ್ಣನ ವ್ಯಕ್ತಿತ್ವದ ಹಿರಿಮೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ. | |
| 37. | "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್" | |
| | **ಉತ್ತರ :** | |
| | **ಆಯ್ಕೆ :** ಪ್ರಸ್ತುತ ಹೇಳಿಕೆಯನ್ನು ಕುವೆಂಪು ಅವರು ರಚಿಸಿರುವ 'ಪಕ್ಷಿಕಾಶಿ' ಎಂಬ ಕವನ ಸಂಕಲನದಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |

| ಪ್ರಶ್ನೆ/ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಸಂದರ್ಭ :*** ಕುವೆಂಪು ಅವರು ಮಲೆನಾಡಿನ ಕುಪ್ಪಳಿಯ ಕವಿಶೈಲದಲ್ಲಿ ಆಶ್ವಯುಜ ಮಾಸದ ನವರಾತ್ರಿಯಲ್ಲಿ ಕುಳಿತು ಆನಂದದಿಂದ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರಿನ ಸೌಂದರ್ಯಾನುಭವವನ್ನು ಅನುಭವಿಸುತ್ತಾ ತಲ್ಲೀನರಾಗಿರುವುದನ್ನು ವರ್ಣನೆ ಮಾಡುವ ಸಂದರ್ಭದಲ್ಲಿ ಮೇಲ್ಕಂಡ ಮಾತು ಬಂದಿದೆ. | |
| | ***ಸ್ವಾರಸ್ಯ :*** ನವರಾತ್ರಿಯ ಸಂದರ್ಭದಲ್ಲಿ ಮಲೆನಾಡಿನ ತುಂಬೆಲ್ಲಾ ಎತ್ತ ನೋಡಿದರತ್ತ ಹಸುರು ವ್ಯಾಪಿಸಿರುತ್ತದೆ. ಆ ಸಮಯದಲ್ಲಿ ಕವಿಯ ಆತ್ಮವು ರಸಪಾನದಿಂದ ಮಿಂದು ಹಸುರಾಗಿದೆ. ಆ ಮೂಲಕ ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಂಬಂಧ ಹಾಗೂ ಪ್ರಕೃತಿಯ ರಸಸ್ವಾದನೆ ಇಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ. ಕವಿ ಮತ್ತು ಪ್ರಕೃತಿ ಒಂದಾಗುವ ಅವರ ಕಾವ್ಯದ ಅದ್ವೈತ ಸ್ಥಿತಿ ಅಭಿವ್ಯಕ್ತಗೊಂಡಿದೆ. | |
| 38. | "ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ಮಗನಿದಕೆ ಬೆದರುವನೆ" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ಲಕ್ಷ್ಮೀಶ ಕವಿ ರಚಿಸಿರುವ 'ಜೈಮಿನಿ ಭಾರತ' ಎಂಬ ಕಾವ್ಯದಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಶ್ರೀರಾಮನ ಅಶ್ವಮೇಧ ಯಾಗದ ಕುದುರೆಯು ವಾಲ್ಮೀಕಿ ಆಶ್ರಮವನ್ನು ಪ್ರವೇಶಿಸಿ, ಹಸುರಾದ ಹುಲ್ಲನ್ನು ತಿನ್ನುವಾಗ, ಆ ತೋಟದ ಕಾವಲು ಕಾಯುತ್ತಿದ್ದ ಲವನು ತನ್ನ ಉತ್ತರೀಯದಿಂದ ಕಟ್ಟಿಹಾಕಿದನು. ಆಗ ಮುನಿಸುತರು ಹೆದರಿ ಕುದುರೆಯನ್ನು ಬಿಟ್ಟುಬಿಡು, ಇಲ್ಲದಿದ್ದರೆ ನಮ್ಮನ್ನು ಹೊಡೆಯುತ್ತಾರೆ ಎಂದು ಹೇಳಿದ ಸಂದರ್ಭದಲ್ಲಿ ಲವನು ನಗುತ್ತಾ ಮುನಿಸುತರಿಗೆ ಈ ಮಾತನ್ನು ಹೇಳಿದನು. | |
| | ***ಸ್ವಾರಸ್ಯ :*** ಲವಕುಶರು ಹುಟ್ಟಿದ್ದು ಋಷ್ಯಾಶ್ರಮದಲ್ಲಾದರೂ ಸಹಜ ಕ್ಷಾತ್ರಗುಣ, ವೀರತೆಯಿಂದ ಕುದುರೆಯನ್ನು ಕಟ್ಟಿಹಾಕುತ್ತಾರೆ. ಕಷ್ಟಸವಾಲುಗಳು ಬಂದಾಗ ಚಿಕ್ಕವರು, ಅಸಮರ್ಥರು ಎಂದು ಕೂರದೆ ದಿಟ್ಟತನದಿಂದ ಎದುರಿಸಬೇಕೆಂಬ ಬಾಲಸಹಜ ಸಾಹಸ ಪ್ರವೃತ್ತಿ ಹಾಗೂ ಲವನಿಗೆ ತನ್ನ ತಾಯಿಯ ಮೇಲಿದ್ದ ಗೌರವ, ಅಭಿಮಾನಗಳನ್ನು ಇಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| X. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | 1 × 4 = 4 |
| 39. | ಯುಗ–ಯುಗಗಳ ..........................................<br>..........................................<br>..........................................<br>.......................................... ಹರಸಿ<br>ಹಕ್ಕಿ ಹಾರುತಿದೆ ನೋಡಿದಿರಾ ?<br>**ಅಥವಾ**<br>ನೀಲಮೇಘ ..........................................<br>..........................................<br>..........................................<br>.......................................... ಕಣ್ಣಾ<br>ಹಕ್ಕಿ ಹಾರುತಿದೆ ನೋಡಿದಿರಾ ?<br>***ಉತ್ತರ :***<br>ಯುಗ–ಯುಗಗಳ ಹಣೆ ಬರೆಹವ ಒರಸಿ<br>ಮನ್ವಂತರಗಳ ಭಾಗ್ಯವ ತೆರೆಸಿ<br>ರೆಕ್ಕೆಯ ಬೀಸುತ ಚೇತನಗೊಳಿಸಿ<br>ಹೊಸಗಾಲದ ಹಸುಮಕ್ಕಳ ಹರಸಿ<br>ಹಕ್ಕಿ ಹಾರುತಿದೆ ನೋಡಿದಿರಾ ?<br>**ಅಥವಾ**<br>ನೀಲಮೇಘಮಂಡಲ ಸಮ ಬಣ್ಣ<br>ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ<br>ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು<br>ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ<br>ಹಕ್ಕಿ ಹಾರುತಿದೆ ನೋಡಿದಿರಾ ? | |
| XI. | **ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | 1 × 4 = 4 |
| | ವಿಷಯಾಂಶಕ್ಕೆ | 3 ಅಂಕಗಳು |
| | ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 40. | ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ<br>ದಡೆಕೆಯುಮಿಲ್ಲ ಕೈಯೊಳೆರೆದಂ ಶ್ರುತಪಾರಗನೆಂತು ಸಂತಸಂ<br>ಬಡಿಸುವೆನಿನ್ನಿದೊಂದು ಧನುವಿರ್ದುದು ದಿವ್ಯಶರಾಳಿಯಿರ್ದುದಿ<br>ಲ್ಲೊಡಮೆ ಸಮಂತು ಪೇಟಿವರೊಳಾವುದನೀವುದೊ ಕುಂಭಸಂಭವ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

*ಉತ್ತರ :*

ದ್ರೋಣನು ತನಗೆ ಬಡತನ ಉಂಟಾಗಲು ಅಶ್ವತ್ಥಾಮನ ಜೊತೆಗೂಡಿ ದೇಶದೇಶಗಳನ್ನೆಲ್ಲಾ ಸುತ್ತಿ, ಪರಶುರಾಮನ ಬಳಿಗೆ ಬಂದನು. ನಾರುಮಡಿಯಿಂದ ಕೂಡಿದ ಸೊಂಟವುಳ್ಳವನು, ಜಟಾಸಮೂಹದಿಂದ ಕೂಡಿದ ಪರಶುರಾಮನು ತನ್ನ ಬಳಿಗೆ ದ್ರವ್ಯಾರ್ಥಿಯಾಗಿ ಬಂದ ದ್ರೋಣನನ್ನು ಚಿನ್ನದ ಪಾತ್ರೆ ಇಲ್ಲದೇ ಇದ್ದುದ್ದರಿಂದ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಟ್ಟು ಪೂಜಿಸಿದನು. ನಂತರ ಪರಶುರಾಮನು ತನ್ನಲ್ಲಿರುವ ಒಡವೆಯನ್ನು ಬೇಡಿದವರಿಗೆ ಕೊಟ್ಟೆನು, ಭೂಮಂಡಲವನ್ನು ಗುರುವಿಗೆ ಕೊಟ್ಟೆನು. ಈಗ ನನ್ನಲ್ಲಿ ಒಂದು ಅಡಕೆಯೂ ಇಲ್ಲ. ಬೇಡುವವನಾದರೂ ವೇದಶಾಸ್ತ್ರಪಾರಂಗತನು. ಹೇಗೆ ಅವನನ್ನು ಸಂತೋಷಪಡಿಸಲಿ ಎಂದು ಯೋಚಿಸಿ ನಂತರ ದ್ರೋಣನನ್ನು ಕುರಿತು ಈಗ ಇದೊಂದು ಬಿಲ್ಲು ಇದೆ. ಇನ್ನೊಂದು ದಿವ್ಯಾಸ್ತ್ರಗಳ ಸಮೂಹ ಇದೆ. ಬೇರೆ ಆಸ್ತಿಯಿಲ್ಲ. ಇವುಗಳಲ್ಲಿ ಯಾವುದನ್ನು ಕೊಡಲಿ ಚೆನ್ನಾಗಿ ಯೋಚಿಸಿ ಹೇಳಿ ಎಂದನು.

ಒಟ್ಟಾರೆಯಾಗಿ ಪರಶುರಾಮನು ತನ್ನ ಬಳಿಗೆ ಬಂದ ದ್ರೋಣನನ್ನು ಆದರ ಆತಿಥ್ಯದಿಂದ ಸತ್ಕರಿಸಿ, ಪೂಜಿಸಿದ್ದು ಹಾಗೂ ಪರಶುರಾಮನ ಪ್ರಾಮಾಣಿಕತೆ, ಸರಳ, ಹಿತ–ಮಿತ ಮೃದು–ವಚನ, ವಿನಯದ ಸಹಚರತೆ, ಗುರು ಹಿರಿಯರನ್ನು ಗೌರವಿಸುವುದು, ವಿದ್ಯೆಯ ಮಹತ್ವ, ತನ್ನ ಪ್ರಸ್ತುತ ಸ್ಥಿತಿಯನ್ನು ತಿಳಿಸಿದ್ದು ಇನ್ನೂ ಮುಂತಾದ ಗುಣಲಕ್ಷಣಗಳು ಈ ಪದ್ಯದಲ್ಲಿ ಕಂಡುಬರುವ ಮೌಲ್ಯಗಳಾಗಿವೆ.

XII. **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** — $2 \times 4 = 8$

| | |
|---|---|
| ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| ಒಟ್ಟು | 4 ಅಂಕಗಳು |

41\. ವಿಶ್ವೇಶ್ವರಯ್ಯ ಅವರು ಮುಂಬೈ ಪ್ರಾಂತ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

***ಅಥವಾ***

ನಾಲ್ವಡಿ ಕೃಷ್ಣರಾಜ ಒಡೆಯರು ಸ್ಥಾಪಿಸಿದ 'ನ್ಯಾಯ ವಿಧಾಯಕ ಸಭೆ' ಮತ್ತು ಜಾರಿಗೆ ತಂದ ಸಾಮಾಜಿಕ ಕಾನೂನುಗಳನ್ನು ಕುರಿತು ಬರೆಯಿರಿ.

*ಉತ್ತರ :*

ವಿಶ್ವೇಶ್ವರಯ್ಯನವರು ೧೮೮೪ರಲ್ಲಿ ಮುಂಬೈ ಪ್ರಾಂತ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಸೇವೆ ಪ್ರಾರಂಭಿಸಿದರು. ಖಾನ್ ದೇಶ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

ಮತ್ತು ನಾಸಿಕ್ ಜಿಲ್ಲೆಗಳಲ್ಲಿ ಹರಿಯುತ್ತಿದ್ದ ಪಂಜ್ರಾ ನದಿಯ ನೀರಾವರಿ ಕಾಲುವೆಗೆ ತೂಬು ಮೇಲ್ಗಾಲುವೆಯನ್ನು ನಿರ್ಮಿಸುವ ಕಾರ್ಯದಲ್ಲಿ ಯಶಸ್ಸು ಗಳಿಸಿ ಮೇಲಧಿಕಾರಿಗಳ ಮೆಚ್ಚುಗೆಗೆ ಪಾತ್ರರಾದರು. ಮುಂಬೈ ಸರ್ಕಾರದ ಸೂಚನೆಯ ಮೇರೆಗೆ ಸಿಂಧ್ ಪ್ರಾಂತ್ಯದ ಸುಕ್ಕೂರು ಪಟ್ಟಣಕ್ಕೆ ಕುಡಿಯುವ ನೀರಿನ ಪೂರೈಕೆಯ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿದರು. ಅಂದಿನ ಮುಂಬೈ ಪ್ರಾಂತ್ಯದ ಗವರ್ನರ್ ಆಗಿದ್ದ ಲಾರ್ಡ್ ಸಂಡ್ ಹರ್ಸ್ಟ್ ಅವರು ಇವರನ್ನು ಮುಕ್ತಕಂಠದಿಂದ ಹಾಡಿ ಹೊಗಳಿದರು. ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಿದರು. ಸ್ವಯಂಚಾಲಿತ ಬಾಗಿಲುಗಳ ಅನ್ವೇಷಣೆ ವಿಶ್ವೇಶ್ವರಯ್ಯ ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು. ನಂತರ ನಾಲ್ಕು ವರ್ಷಗಳ ಕಾಲ ಮುಂಬೈ ಪ್ರಾಂತ್ಯದ ಸ್ಯಾನಿಟರಿ ಎಂಜಿನಿಯರ್ ಆಗಿ ನೇಮಕಗೊಂಡರು. ಈ ಹುದ್ದೆಗೆ ನೇಮಕವಾದ ಪ್ರಥಮ ಭಾರತೀಯರು ಎಂಬುದು ಗಮನಾರ್ಹ ಅಂಶವಾಗಿದೆ.

**ಅಥವಾ**

ನಾಲ್ವಡಿ ಕೃಷ್ಣರಾಜ ಒಡೆಯರು ಸ್ಥಾಪಿಸಿದ 'ನ್ಯಾಯ ವಿಧಾಯಕ ಸಭೆ ಮತ್ತು ಜಾರಿಗೆ ತಂದ ಸಾಮಾಜಿಕ ಕಾನೂನುಗಳು.'

ನ್ಯಾಯ ವಿಧಾಯಕ ಸಭೆ : ನಾಲ್ವಡಿ ಕೃಷ್ಣರಾಜ ಒಡೆಯರು ೧೯೦೭ ರಲ್ಲಿ ನ್ಯಾಯವಿಧಾಯಕ ಸಭೆಯನ್ನು ಸ್ಥಾಪಿಸಿದರು. ಇದರ ಸದಸ್ಯರ ಸಂಖ್ಯೆ ೫೦. ಇದರಲ್ಲಿ ಜನರಿಂದ ಆಯ್ಕೆಯಾದವರು ೨೨ ಸದಸ್ಯರು. ಮೇಲ್ಮನೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಸಂಸ್ಥೆ, ಜೂನ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಬೆಂಗಳೂರಿನಲ್ಲಿ ಸಮಾವೇಶಗೊಳ್ಳುತ್ತಿತ್ತು. ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲ ವಿಷಯಗಳನ್ನು ವಿಮರ್ಶಿಸುವ ಅಧಿಕಾರ ಈ ಸಂಸ್ಥೆಗೆ ಇದ್ದಿತು. ಮುಖ್ಯವಾಗಿ ಯಾವುದೇ ಕಾನೂನನ್ನು ಜಾರಿಗೊಳಿಸಲು ಆ ಸಭೆಯ ಅನುಮತಿ ಅಗತ್ಯವಾಗಿತ್ತು. ಆ ಸಭೆಗೆ ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹ ಇದ್ದಿತ್ತು.

ಜಾರಿಗೆ ತಂದ ಸಾಮಾಜಿಕ ಕಾನೂನುಗಳು :

೧೯೦೯ರಲ್ಲಿ ದೇವದಾಸಿ ಪದ್ಧತಿ ನಿಷೇಧ, ೧೯೧೦ರಲ್ಲಿ ಬಸವ ಪದ್ಧತಿ, ಗೆಜ್ಜೆಪೂಜೆ ಪದ್ಧತಿ ಸಂಪೂರ್ಣ ನಿರ್ಮೂಲನೆ, ೧೯೩೬ರಲ್ಲಿ ವೇಶ್ಯಾ ವೃತ್ತಿ ತಡೆಗಟ್ಟುವ ಕಾಯ್ದೆ, ವಿಧವಾ ಮರುವಿವಾಹ ಕಾಯ್ದೆ, ಸ್ತ್ರೀಯರಿಗೆ ಕಡ್ಡಾಯ ಶಿಕ್ಷಣ ಜಾರಿ, ೧೯೧೪ರಲ್ಲಿ ಶಾಲಾ ಪ್ರವೇಶಕ್ಕೆ ಜಾತಿ ಪರಿಗಣನೆಯ ನಿಷೇಧ, ೧೯೧೯ರಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಣ ಶುಲ್ಕ ರದ್ಧತಿ,

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ೧೯೨೭ರಲ್ಲಿ ಮೊಟ್ಟ ಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು, ೧೯೦೫ ರಲ್ಲಿ ಸಹಕಾರಿ ಕಾರ್ಮಿಕ ಪರಿಹಾರ ಕಾಯ್ದೆ, ೧೯೧೩ರಲ್ಲಿ ಮೈಸೂರು ಗ್ರಾಮ ನ್ಯಾಯಾಲಯ ಕಾಯ್ದೆ, ೧೯೧೮ರಲ್ಲಿ ಗ್ರಾಮ ಪಂಚಾಯಿತಿಗಳ ಕಾಯ್ದೆಗಳನ್ನು ಜಾರಿಗೆ ತಂದರು. | |
| 42. | ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.<br>***ಅಥವಾ***<br>ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.<br>***ಉತ್ತರ :***<br>ದುರ್ಯೋಧನನು ಭೀಷ್ಮರನ್ನು ಕುರಿತು ನಾನು ಪಾಂಡವರೊಡನೆ ನೆಲಕ್ಕಾಗಿ ಹೋರಾಡುವೆನೆಂದು ಭಾವಿಸಿದಿರಾ, ನಾನು ಛಲಕ್ಕಾಗಿ ಯುದ್ಧ ಮಾಡುವೆನು. ಈ ಭೂಮಿ ನನಗೆ ಪಾಳು ಭೂಮಿ. ಕರ್ಣನನ್ನು ಕೊಲ್ಲಿಸಿದ ನೆಲದೊಡನೆ ಮತ್ತೆ ನಾನು ಬಾಳುವುದುಂಟೇ ? ನನ್ನ ಪ್ರೀತಿಯ ಗೆಳೆಯ ಕರ್ಣನನ್ನು, ಪ್ರೀತಿಯ ತಮ್ಮನಾದ ದುಶ್ಶಾಸನನನ್ನು ಕೊಂದ ಅರ್ಜುನ–ಭೀಮರು ಇರುವ ತನಕ, ನನ್ನ ದೇಹದಲ್ಲಿ ನನ್ನ ಪ್ರಾಣ ಇರುವ ತನಕ ನಾನು ಸಂಧಿ ಮಾಡಿಕೊಳ್ಳುವುದಿಲ್ಲ. ಮೊದಲು ಆ ಇಬ್ಬರನ್ನು ಕೊಂದು ನಂತರ ನನ್ನ ದುಃಖವು ತಣ್ಣಗಾದಾಗ ಪ್ರಸಿದ್ಧನಾದ ಧರ್ಮರಾಯನೊಡನೆ ಸಂಧಿ ಮಾಡಿಕೊಳ್ಳಲು ಆಗುವುದಿಲ್ಲ ಎಂದು ಹೇಳುವೆನೇ ? ನನ್ನ ಒಡಹುಟ್ಟಿದ ನೂರು ಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು. ಆಗ ನನಗೆ ಕೋಪವು ಹುಟ್ಟಿ ಹೊರ ಹೊಮ್ಮಿತು. ಸತ್ತವರೇನು ಮತ್ತೆ ಹುಟ್ಟುವುದಿಲ್ಲ. ಆದ್ದರಿಂದ ಪಾಂಡವರೊಡನೆ ಹೋರಾಡಿ ಛಲವನ್ನೇ ಮೆರೆಯುತ್ತೇನೆ. ನಾನು ಪಾಂಡವರೊಂದಿಗೆ ಯುದ್ಧ ಮಾಡದೇ ಇರುವುದಿಲ್ಲ. ನಾಳಿನ ಸಮರದಲ್ಲಿ ಈ ಭೂಮಿಗೆ ಪಾಂಡವರು ಒಡೆಯರಾಗಬೇಕು ಇಲ್ಲವೇ ನಾನು ಒಡೆಯನಾಗಬೇಕು. ಆದ್ದರಿಂದ ನಾನು ಯುದ್ಧವನ್ನೇ ಮಾಡುವೆನು ಎಂದು ಹೇಳಿದನು. ಹೀಗೆ ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿದೆ.<br>***ಅಥವಾ***<br>ದುರ್ಯೋಧನನು ತಂದೆ–ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರ ಬಳಿಗೆ ಬಂದಾಗ ಭೀಷ್ಮರು ದುರ್ಯೋಧನನಿಗೆ ಸಲಹೆಯನ್ನು ನೀಡುತ್ತಾ ನೀನು ಒಪ್ಪಿಕೊಳ್ಳುವುದಾದರೆ ಪಾಂಡವರನ್ನು ಒಪ್ಪಿಸಿ ಅವರೊಂದಿಗೆ ಸಂಧಿಯನ್ನು ಮಾಡಿ ಮೊದಲಿನಂತೆಯೇ ಅವರು ನಡೆಯುವ ಹಾಗೇ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
| --- | --- | --- |
| | ಮಾಡುವೆನು. ಇನ್ನೂ ಅವರು ನಾವು ಹೇಳಿದ್ದನ್ನು ಒಪ್ಪಿಕೊಳ್ಳುತ್ತಾರೆ. ನನ್ನ ಮಾತನ್ನು ಮೀರುವವರಲ್ಲ. ನೀನು ಕೂಡ ನಾವು ಹೇಳಿದುದನ್ನು ಮೀರದೆ ನಡೆದುಕೊಳ್ಳಬೇಕು ಎಂದಾಗ ದುರ್ಯೋಧನನು ಮುಗುಳ್ನಗೆ ನಕ್ಕು ಅಜ್ಜ, ನಿಮಗೆ ನಮಸ್ಕರಿಸಿ ನಿಮ್ಮಿಂದ ಆಶೀರ್ವಾದವನ್ನು ಪಡೆದುಕೊಂಡು ಹೋಗಲೆಂದು ಬಂದೆನೇ ವಿನಃ ಆ ನನ್ನ ಶತ್ರುಗಳಾದ ಪಾಂಡವರೊಡನೆ ಒಪ್ಪಂದವನ್ನು ಏರ್ಪಡಿಸಲೆಂದು ಬಂದೆನೆ. ನಾಳಿನ ಸಮರದಲ್ಲಿ ನನ್ನ ಕೆಲಸ ಏನು ಹೇಳಿ ಎನ್ನುತ್ತಾ ನಾನು ಪಾಂಡವರೊಡನೆ ನೆಲಕ್ಕಾಗಿ ಹೋರಾಡುತ್ತಿಲ್ಲಾ ಛಲಕ್ಕಾಗಿ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿ. ಕರ್ಣನನ್ನು ಕೊಲ್ಲಿಸಿದ ನೆಲದೊಡನೆ ನಾನು ಮತ್ತೆ ಬಾಳುವುದುಂಟೇ ? ಪ್ರೀತಿಯ ಗೆಳೆಯ ಕರ್ಣ, ಪ್ರೀತಿಯ ತಮ್ಮ ದುಶ್ಯಾಸನನನ್ನು ಕೊಂದ ಅರ್ಜುನ–ಭೀಮರು ಇರುವ ತನಕ, ನನ್ನ ದೇಹದಲ್ಲಿ ಪ್ರಾಣ ಇರುವವರೆಗೂ ಅಜ್ಜ, ಸಂಧಿಯನ್ನು ಮಾಡಿಕೊಳ್ಳುವುದಿಲ್ಲ. ಮೊದಲು ಆ ಇಬ್ಬರನ್ನು ಕೊಂದು ನಂತರ ಧರ್ಮರಾಯನೊಡನೆ ಸಂಧಿ ಮಾಡಿಕೊಳ್ಳಲು ಆಗುವುದಿಲ್ಲ ಎಂದು ಹೇಳುವೆನೇ ? ನನ್ನ ಒಡಹುಟ್ಟಿದ ನೂರು ಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು, ಸತ್ತವರೇನು ಮತ್ತೆ ಹುಟ್ಟುವುದಿಲ್ಲ. ಆದ್ದರಿಂದ ಪಾಂಡವರೊಡನೆ ಹೋರಾಡಿ ಛಲವನ್ನೇ ಮೆರೆಯುವೆನು. ಅಜ್ಜ, ನಾನು ಪಾಂಡವರೊಂದಿಗೆ ಯುದ್ಧ ಮಾಡದೇ ಇರುವುದಿಲ್ಲ. ನಾಳಿನ ಸಮರದಲ್ಲಿ ಈ ಭೂಮಿಗೆ ಪಾಂಡವರು ಒಡೆಯರಾಗಬೇಕು ಇಲ್ಲವೇ ನಾನು ಒಡೆಯನಾಗಬೇಕು. ಆದ್ದರಿಂದ ನಾನು ಯುದ್ಧವನ್ನೇ ಮಾಡುವೆನು ಎಂದು ಹೇಳಿದನು. | |
| XIII. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | 1 × 4 = 4 (2 + 2) |
| | ವಿಜ್ಞಾನದ ಯಾವುದೇ ವಿಭಾಗ ಸಮಾಜದ ಒಳಿತಿಗಾಗಿ ನೆರವಾಗಬಲ್ಲದು. ವಿಶೇಷವಾಗಿ ರಸಾಯನಶಾಸ್ತ್ರ ಜೀವನದ ಅನೇಕ ಕ್ಷೇತ್ರಗಳಲ್ಲಿ ಬಳಕೆಯಾಗಿರುವುದು ಕಂಡುಬರುತ್ತದೆ. ರಾಸಾಯನಿಕ ಕ್ರಿಯೆಗಳಿಲ್ಲದ ಕಾರ್ಯಗಳೇ ಅಪರೂಪ. ವಿಜ್ಞಾನದ ಈ ವಿಭಾಗದಲ್ಲಿ ಆಳವಾದ ಸಂಶೋಧನೆಗಳು ನಡೆದು ಮನುಕುಲದ ಪ್ರಗತಿಗೆ (ಏಳಿಗೆಗೆ) ಕಾರಣೀಭೂತವಾಗಬೇಕಾಗಿದೆ. | |
| | ವಿಜ್ಞಾನಿಗಳು ತಮ್ಮ ಅಮೂಲ್ಯವಾದ ಜ್ಞಾನವನ್ನು ಸಾಮಾನ್ಯ ಜನರ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮನೋಭಾವಗಳನ್ನು ತಿದ್ದುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಸಮಾಜದ ಸುಧಾರಣೆಗೆ ನೆರವಾಗಬೇಕು. ವಿಜ್ಞಾನಿಯ ವರ್ತನೆ, ಮನೋಭಾವ ಅವನು ದಂತಗೋಪುರದಲ್ಲಿರುವ ಅಪೂರ್ವಬುದ್ಧಿಶಾಲಿ ಎಂಬ ಭಾವನೆ ಜನರಲ್ಲಿ ಮೂಡುವಂತಿರಬಾರದು. ಸಮಾಜದ ದುಡಿಮೆಯಲ್ಲಿ ಶಿಕ್ಷಣವನ್ನು ಪಡೆದಿರುವ ವಿಜ್ಞಾನಿ, ಸಾಮಾನ್ಯ ಜನರ ಯೋಚನಾಶಕ್ತಿಯನ್ನು ಬೆಳೆಸುವಲ್ಲಿ ಶ್ರಮಿಸುವುದು ಆತನ ಕರ್ತವ್ಯವೇ ಹೊರತು ಉಪಕಾರವೇನೂ ಅಲ್ಲ. ವಿಶೇಷ ಸಂದರ್ಭಗಳಲ್ಲಿ ಜನಪ್ರಿಯ ಉಪನ್ಯಾಸಗಳು ವಿಜ್ಞಾನ ವಿಷಯದಲ್ಲಿ ಆಸಕ್ತರಾಗಿರುವ ಬಹು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಸಹಾಯವಾಗುತ್ತದೆ.<br><br>ನಮ್ಮ ದೇಶದಲ್ಲಿ ವಿಜ್ಞಾನಿಗಳು ಹಲವಾರು ಸಂದರ್ಭಗಳಲ್ಲಿ ಪರಸ್ಪರ ವೈರುಧ್ಯದ ಮನೋಭಾವವನ್ನು ವ್ಯಕ್ತಪಡಿಸುತ್ತಿರುವುದು ದುರದೃಷ್ಟಕರ. ಅವರು ಪ್ರಯೋಗಶಾಲೆಗಳಲ್ಲಿ ತಮ್ಮ ಹೆಚ್ಚಿನ ವಿಚಾರಶಕ್ತಿಯನ್ನೂ, ವೈಜ್ಞಾನಿಕ ಮನೋಭಾವವನ್ನೂ ಪ್ರದರ್ಶಿಸುತ್ತಾರೆ. ಆದರೆ ಅದು ನಿಜ ಜೀವನದಲ್ಲಿ ಅವರ ಯೋಚನಾ ಶಕ್ತಿ 'ರಜೆ' ತೆಗೆದುಕೊಂಡಿದೆಯೋ ಎಂಬಂತೆ ಅವೈಜ್ಞಾನಿಕವಾಗಿ ವರ್ತಿಸುತ್ತಾರೆ. ಒಂದೇ ಮನಸ್ಸು ಒಮ್ಮೆ ತಾರ್ಕಿಕವಾಗಿ ಚಿಂತಿಸಿದರೆ ಮತ್ತೊಮ್ಮೆ ಅತಾರ್ಕಿಕವಾಗಿ ಯೋಚಿಸುತ್ತದೆ. ಯೋಚನೆಯಲ್ಲಿ ಏಕಸೂತ್ರತೆ ಕಂಡುಬರುವುದಿಲ್ಲ. | |
| 43. | ಪ್ರಶ್ನೆಗಳು :<br>ಅ) ವಿಜ್ಞಾನಿಗಳ ವೈರುಧ್ಯ ಭಾವನೆಯನ್ನು ತಿಳಿಸಿ.<br>ಬ) ಸಮಾಜದ ಸುಧಾರಣೆಗೆ ವಿಜ್ಞಾನಿಗಳು ಹೇಗೆ ನೆರವಾಗಬೇಕು ?<br>**ಉತ್ತರ :**<br>ಅ) ನಮ್ಮ ದೇಶದಲ್ಲಿ ವಿಜ್ಞಾನಿಗಳು ಹಲವಾರು ಸಂದರ್ಭಗಳಲ್ಲಿ ಪರಸ್ಪರ ವೈರುಧ್ಯದ ಮನೋಭಾವವನ್ನು ವ್ಯಕ್ತಪಡಿಸುತ್ತಾರೆ. ಪ್ರಯೋಗಶಾಲೆಗಳಲ್ಲಿ ತಮ್ಮ ಹೆಚ್ಚಿನ ವಿಚಾರಶಕ್ತಿಯನ್ನೂ, ವೈಜ್ಞಾನಿಕ ಮನೋಭಾವವನ್ನೂ ಪ್ರದರ್ಶಿಸುತ್ತಾರೆ. ಆದರೆ ಅದು ನಿಜ ಜೀವನದಲ್ಲಿ ಅವರ ಯೋಚನಾ ಶಕ್ತಿ 'ರಜೆ' ತೆಗೆದುಕೊಂಡಿದೆಯೋ ಎಂಬಂತೆ ಅವೈಜ್ಞಾನಿಕವಾಗಿ ವರ್ತಿಸುತ್ತಾರೆ. ಒಂದೇ ಮನಸ್ಸು ಒಮ್ಮೆ ತಾರ್ಕಿಕವಾಗಿ ಚಿಂತಿಸಿದರೆ ಮತ್ತೊಮ್ಮೆ ಅತಾರ್ಕಿಕವಾಗಿ ಯೋಚಿಸುತ್ತದೆ. ಯೋಚನೆಯಲ್ಲಿ ಏಕಸೂತ್ರತೆ ಕಂಡುಬರುವುದಿಲ್ಲ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಬ) ವಿಜ್ಞಾನಿಗಳು ತಮ್ಮ ಅಮೂಲ್ಯವಾದ ಜ್ಞಾನವನ್ನು ಸಾಮಾನ್ಯ ಜನರ ಮನೋಭಾವಗಳನ್ನು ತಿದ್ದುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ವಿಜ್ಞಾನಿಯ ವರ್ತನೆ, ಮನೋಭಾವ ಅವನು ದಂತಗೋಪುರದಲ್ಲಿರುವ ಅಪೂರ್ವಬುದ್ಧಿಶಾಲಿ ಎಂಬ ಭಾವನೆ ಜನರಲ್ಲಿ ಮೂಡುವಂತಿರಬಾರದು. ಸಮಾಜದ ದುಡಿಮೆಯಲ್ಲಿ ಶಿಕ್ಷಣವನ್ನು ಪಡೆದಿರುವ ವಿಜ್ಞಾನಿ, ಸಾಮಾನ್ಯ ಜನರ ಯೋಚನಾಶಕ್ತಿಯನ್ನು ಬೆಳೆಸುವಲ್ಲಿ ಶ್ರಮಿಸಬೇಕು. ವಿಶೇಷ ಸಂದರ್ಭಗಳಲ್ಲಿ ವಿಜ್ಞಾನಿಗಳು ಜನಪ್ರಿಯ ಉಪನ್ಯಾಸಗಳನ್ನು ಏರ್ಪಡಿಸಿದರೆ ವಿಜ್ಞಾನ ವಿಷಯದಲ್ಲಿ ಆಸಕ್ತರಾಗಿರುವ ಬಹು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಸಹಾಯವಾಗುತ್ತದೆ. ಆ ಮೂಲಕ ಸಮಾಜ ಸುಧಾರಣೆಗೆ ನೆರವಾಗಬೇಕು. | |
| XIV. | **ಪತ್ರ ಲೇಖನ ಬರೆಯುವುದು :** | 1 × 5 = 5 |
| 44. | ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ 'ಅಂಜಲಿ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ 'ಭಾಷಾ ಪ್ರಯೋಗಾಲಯ' ಪ್ರಾರಂಭಿಸಲು ಅಗತ್ಯ ನೆರವು ನೀಡುವಂತೆ ಮೈಸೂರಿನ ಕೇಂದ್ರೀಯ ಭಾಷಾ ಸಂಸ್ಥಾನದ ನಿರ್ದೇಶಕರಿಗೆ ಮನವಿ ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆಯ 'ರಮೇಶ್' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ನಡೆಯುವ 'ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಆಗಮಿಸುವಂತೆ ವಿನಂತಿಸಿ ಮಡಿಕೇರಿಯ ಪೇಟೆ ಬೀದಿಯ ನಿವಾಸಿ 'ನಟರಾಜು' ಎಂಬ ಹೆಸರಿನ ತಂದೆಗೆ ಪತ್ರವನ್ನು ಬರೆಯಿರಿ. | |
| | ವ್ಯಾವಹಾರಿಕ / ಮನವಿ ಪತ್ರ : | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಖಾಸಗಿ / ತಂದೆಯವರಿಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದ ಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| XV. | **ಪ್ರಬಂಧ ಬರೆವಣಿಗೆ :** | 1 × 5 = 5 |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು–ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |
| 45. | ಶಾಲಾಭಿವೃದ್ಧಿಯಲ್ಲಿ ಜನಪ್ರತಿನಿಧಿಗಳ ಪಾತ್ರ.<br>**ಅಥವಾ**<br>ನನ್ನ ನೆಚ್ಚಿನ ಪ್ರವಾಸಿತಾಣಗಳು. | |